ಸಾಕ್ಷಿಯನ್ನು ದಿ: 2.4.2026 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**<u>ಪಾಟೀಸವಾಲುಃ- ಪ್ರತಿವಾದಿಗಳ ಪರ ಕೆಎಂಜಿ ವಕೀಲರಿಂದ:-</u>**

1. ನಾನು ಬಿ.ಎ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಮದುವೆ ನಂತರ ಬಿಎ ವ್ಯಾಸಾಂಗ ಮಾಡಿರುವ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ಪುಟ್ಟಸ್ವಾಮಿಗೆ ಇಬ್ಬರು ಸಹೋದರರು. 4 ಸಹೋದರಿಯರು, ಅವರುಗಳೆಂದರೆ ಅಣ್ಣದೇವೆಗೌಡ , ತಮ್ಮ ಡಿ ರಾಜಣ್ಣ , ಅಕ್ಕ ನಿಂಗಮ್ಮ , ದೇವಮ್ಮ , ಮರಮ್ಮ, ಒಬ್ಬರು ಮರಣಹೊಂದಿರುತ್ತಾರೆ. ನನ್ನ ತಾತ ದೆವೆಗೌಡ ಉ ಪಾಪೆಗೌಡರಿಗೆ ಒಟ್ಟು ಎಷ್ಟು ಆಸ್ತಿ ಇರುತ್ತದೆ ನನಗೆ ಗೊತ್ತಿಲ್ಲ. ನನ್ನ ತಂದೆ ಪುಟ್ಟಸ್ವಾಮಿಅವರಿಗೆ ಬಂದಂತ ಆಸ್ತಿ ಬಗ್ಗೆ ನನಗೆ ಗೊತ್ತಿರುತ್ತದೆ. ಅವುಗಳು ಸ.ನಂ 252 37 ಗುಂಟೆ , ಸ.ನಂ282 21 ಗುಂಟೆ , ಸ.ನಂ 91 10 ಗುಂಟೆ . ನನ್ನ ತಂದೆಗೆ ನನ್ನ ತಾತ ಯಾವಾಗ ವಿಭಾಗಮಾಡಿಕೊಟಿಟರುತ್ತಾರೆ ನನಗೆ ಗೊತ್ತಿಲ್ಲ. ನನ್ನ ತಂದೆ ವ್ಯವಸಾಯ ಮಾಡಿಕೊಂಡಿದ್ದರು. ನನ್ನ ತಂದೆ ವ್ಯವಸಾಯ ಹೊರತುಪಡಿಸಿ ಹಸುಸಾಕಣೆ ಮಾಡುತ್ತಿದ್ದರು. ಅವರ ಜೀವಿತ ಕಾಲದಲ್ಲಿ ಹಸು ಸಾಗಣೆ ಮಾಡಿ ಅದರಿಂದ ಬಂದ ಆದಾಯದ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ.

2. ಏಪ್ರಿಲ್ 2008 ರಲ್ಲಿ ವಿವಾಹವಾಗಿರುತ್ತೇನೆ. ನನ್ನ ಸಹೋದರ ಸಹೋದರಿಯರಲ್ಲಿ ನನ್ನ ಅಣ್ಣನಿಗೆ ಮಾತ್ರ ಮದುವೆ ಆಗಿರುತ್ತದೆ ಇನ್ನಿತರರಿಗೆ ವಿವಾಹವಾಗಿಲ್ಲ. ನನ್ನ ತಾತ ಜೀವಿತ ಕಾಲದಲ್ಲಿ ವಿಭಾಗ ಮಾಡಿಕೊಂಡಾಗ ಅವರ ಹೆಸರಿಗೆ ಕೆಲವೊಂದು ಆಸ್ತಿಗಳು ಅವರ ಹೆಸರಿನಲ್ಲಿ ಇಟ್ಟುಕೊಂಡಿದ್ದರು ಎಂದರೆ ಸಾಕ್ಷಿಯು ಕೆಲವು ಅಜ್ಜಪಾಲು ಆಸ್ತಿ ಇಟ್ಟುಕೊಂಡಿದ್ದರು ಎಂದು ಹೇಳುತ್ತಾರೆ. ಸದರಿ ಅಜ್ಜಪಾಲು ಆಸ್ತಿಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ನನ್ನ ಅಕ್ಕ ಪಿಯುಸಿ ಮಾಡಿದ್ದು ತಂಗಿ ಎಂ.ಕಾಂ ಮಾಡಿರುತ್ತಾರೆ. ಎಲ್ಲರನ್ನು ನಮ್ಮ ತಂದೆ ಮದುವೆ ಮಾಡಿಕೊಟ್ಟಿರುತ್ತಾರೆ. ಹೆಣ್ಣುಮಕ್ಕಳು ಮದುವೆ ಮಾಡಿಕೊಡುವ ಸಂದರ್ಭದಲ್ಲಿ ನನ್ನ ತಂದೆ ಗ್ರಾಮೀಣ ಬ್ಯಾಂಕಲ್ಲಿ 2 ಲಕ್ಷ , ಅಗಸನಪುರ ಕೃಷಿ ಪತ್ತಿನ ಸಹಕಾರ ಸಂಘ 1 ಲಕ್ಷ, ವಿಶ್ವೇಶ್ವರಯ್ಯ ಗ್ರಾಮೀಣ ಬ್ಯಾಂಕು 36 ಸಾವಿರ , ಗ್ರಾಮಸ್ಥರಿಂದ 4 ಲಕ್ಷ ಸಾಲ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಸಾಲದ ಮರುಪಾವತಿ ವಿಚಾರವಾಗಿ ಕರ್ನಾಟಕ ಗ್ರಾಮಿಣ ಬ್ಯಾಂಕು ನನ್ನ ತಂದೆ ಮೇಲೆ ಒಎಸ್ 135/25 ರಂತೆ ದಾವೆ ಹೂಡಿರುತ್ತಾರೆ ನನಗೆ

ಗೊತ್ತಿಲ್ಲ. ನನ್ನ ದೊಡ್ಡಪ್ಪ ದೇವೆಗೌಡರ ಮಗ ನಾಗರಾಜು ಪಾಲುವಿಭಾಗ ಸಂಬಂಧಿಸಿದಂತೆ ಒಎಸ್ 308/22 ಷೆಡ್ಯೂಲ್ ಸ್ವತ್ತಿಗೆ ದಾವೆ ಸಲ್ಲಿಸಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ದಾವೆಯನ್ನು ಪಾಲುವಿಭಾಗ ಆದಕಾರಣ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸೃಷ್ಟಿಸಿರಬಹುದು ಎಂದು ಹೇಳುತ್ತಾರೆ. ನನ್ನ ತತನ ಹೆಸರಿನಲ್ಲಿರುವ ಕೆಲವೊಂದು ಆಸ್ತಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ. ಒಟ್ಟು ಕುಟುಂಬದ ಆಸ್ತಿ ಎಂದು ಹೇಳಿದ್ದು ನನ್ನ ದೊಡ್ಡಪ್ಪ ಚಿಕ್ಕಪ್ಪನ ಪಕ್ಷಗಾರರಾಗಿ ಮಾಡಿಲ್ಲ. ವಿಭಾಗ ಆಗಿರುವ ಬಗ್ಗೆ ಪೂರಕವಾಗಿ ಯಾವುದೆ ದಾಖಲಾತಿ ಹಾಜರುಪಡಿಸಿಲ್ಲ. ಒಟ್ಟು ಕುಟುಂಬದ ಆಸ್ತಿಯಲ್ಲಿ ಯಾವುದೆ ರೀತಿ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು**.

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

1 ನೇ ಅಪರ ಸಿ.ಜೆ. ಮತ್ತು ಜೆ.ಎಂಎಫ್.ಸಿ

ಮಳವಳ್ಳಿ